ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, 27th March 1973/Chaitra 6, 1895 (Saka Era)

The House met in the Assembly Chamber, Vidhana Soudha, at One of the Clock.

MR DEPUTY SPEAKER [SRI. B. P. KADAM] in the Chair.

NOTICE OF ADJOURNMENT MOTION

re : Elections in Haliyal

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಅಧ್ಯಕ್ಷರೇ, ನಾನು ಒಂದು ನೋಟಿಸ್‌ನ್ನು ಕಳುಹಿಸಿದ್ದೆ. ನಾನು ಆ ಬಗ್ಗೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ ಹಳಿಯಾಳ್‌ನಲ್ಲಿ ಇತ್ತೀಚೆಗೆ ಪುರಸಭಾ ಚುನಾವಣೆ ನಡೆಯಿತು. ಆ ಪುರಸಭಾ ಚುನಾವಣಾ ಪ್ರಚಾರಕ್ಕಾಗಿ ಪ್ರಾದೇಶಿಕ ಸಚಿವರಾದ ಶ್ರೀ ಮಾನ್ ಬಿ. ಬಸವಲಿಂಗಪ್ಪನವರು ಮತ್ತು ಪಾರ್ಟಿ ಅಧ್ಯಕ್ಷರೂ ಕೂಡ ಒಟ್ಟಿಗೆ ಹೋಗಿದ್ದರು. ಆ ಸಮುದಯಲ್ಲಿ ಅವರ ಕಾರಿಗೂ ಕಲ್ಲಿನ ಏಟು ಬಿದ್ದು ಕಾರಿಗೂ ಜಖಂ ಆಗಿ ಬಹಳ ತೊಂದರೆಗಳಾಯಿತು. ಆದರೂ ಕೂಡ ಕಲ್ಲಿನ ಚುನಾವಣೆಯಲ್ಲಿ ಸಂಪೂರ್ಣವಾಗಿ ಪರಾಭವ ಹೊಂದಿದ್ದಾರೆ. ಫಲಿತಾಂಶವನ್ನು ನೋಡಿದರೆ ಈ ರೀತಿ ಇದೆ—ಆಡಳಿತ ಪಕ್ಷಕ್ಕೆ 4. ವಿರೋಧ ಪಕ್ಷಕ್ಕೆ 11 ಬಂದಿದೆ. ಈ ರೀತಿ ಇದ್ದ ಮೇಲೆ ನನಗೆ ಏನು ಅನಿಸುತ್ತದೆ ಎಂದರೆ ಈ ಬಡ್ಜೆಟ್ ಅಧಿವೇಶನವಲ್ಲಿ ನಾವು ಇಲ್ಲಿ ಆ ಬಗ್ಗೆ ಚರ್ಚೆ ಮಾಡಬೇಕಾದರೆ, ಹೇಗೆ ಮಾಡಬೇಕು ! ಆಡಳಿತ ಪಕ್ಷದವರು ಸಂಪೂರ್ಣವಾಗಿ ಈಗಾಗಲೇ ಜನತೆಯ ಬೆಂಬಲವನ್ನು ಕಳೆದು ಕೊಂಡಿದ್ದಾರೆ. ಇದೇ ರೀತಿ ಗುಂಡ್ಲುಪೇಟೆ ಚುನಾವಣೆಯಲ್ಲೂ ಜನತೆಯ ಬೆಂಬಲವನ್ನು ಕಳೆದುಕೊಂಡಿದ್ದಾರೆ. ಇಷ್ಟೇ ಅಲ್ಲ, ಮೊನ್ನೆ ನಡೆದ ಪದವೀಧರರ ಕ್ಷೇತ್ರದಲ್ಲೂ ಕೂಡ ಜನತೆಯ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಈ ರೀತಿ ಎಲ್ಲಾ ಚುನಾವಣೆಗಳಲ್ಲೂ ಕೂಡ ಜನತೆಯ ಬೆಂಬಲವನ್ನು ಕಳೆದುಕೊಂಡಿದ್ದಾರೆ ಎಂದು ಈ ಚುನಾವಣೆಯಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದುದರಿಂದ ನನಗೆ ಏನು ಅನಿಸುತ್ತದೆ ಎಂದರೆ ಆವರು ಈ ಎಲ್ಲಾ ಚುನಾವಣೆಗಳಲ್ಲೂ ಬಿದ್ದು ಹೋಗಿರುವುದರಿಂದ ಈ ರಾಜ್ಯಸರ್ಕಾರವನ್ನು ಆಳುವುದಕ್ಕೆ ಅವರಿಗೆ ಸರಿಯಾದ ಒಂದು ಅಧಿಕಾರವಿಲ್ಲ ಎಂದು ನನ್ನ ಮನವಿ.

Sri M. H. JAYAPRAKASH NARAYAN (Sirsi).—May I know whether the Chair has permitted Sri Vatal Nagaraj to make a statement ?

Sri M. MALLAPPA (Birur).—I rise to a point of order. Under what rule the hon. member is making a statement ?

---

†Indicates that remarks or speeches have not been revised by the member concerned.

Mr DEPUTY SPEAKER.—The Hon. member Sri Vatal Nagaraj has already been replied and he must be content with it. His adjournment motion has nothing to do with the elections at Haliyal or other Municipal Elections. He must give an adjournment motion of a definite matter of urgent public importance. The House is not concerned with the Municipal Elections results. These are all party matters.

ಶ್ರೀ ಎಂ. ಎಸ್. ಜಯಪ್ರಕಾಶ್ ನಾರಾಯಣ್.—I raise a point of order ಅಧ್ಯಕ್ಷರೇ, ಮಾನ್ಯ ಸದಸ್ಯರಾಗಿರತಕ್ಕಂಥ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಇದ್ದಕ್ಕಿದ್ದ ಹಾಗೆ ಎಮ್ಮಿ ನಿಂತು ಈ ಒಂದು ಮುನಿಸಿಪಾಲಿಟಿಯಲ್ಲಿ ಆಗಿರತಕ್ಕಂಥ ಚುನಾವಣೆಯ ಫಲಿತಾಂಶದ ಬಗ್ಗೆ ಅವರು ಸ್ಟೇಟ್‌ಮೆಂಟ್ ಮಾಡುವುದು ಸರಿಯೇ ? ಅವರ ಸ್ಟೇಟ್‌ಮೆಂಟ್ ಬಗ್ಗೆ ಈ ವಿಷಯದ ಕಾರ್ಯಕಲಾಪ ವಿಷಯ ಪಟ್ಟಿಯಲ್ಲೂ ಕೂಡ ಸೇರಿಲ್ಲಾ. ಅವರು ಕೊಟ್ಟಂಥ ನೋಟೀಸನ್ನು ತಾವು ಆಲೋ ಮಾಡಿಲ್ಲ. ಆದುದರಿಂದ ಅವರು ಈಗ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವರಿಗೆ ಯಾವ ವಿಧವಾದ ಹಕ್ಕು ಇದೆ ಎನ್ನುವುದನ್ನು ತಿಳಿಸಬೇಕು.

Mr. DEPUTY SPEAKER.—There is great force in what Sri Jayaprakash Narayain says. The Hon. member Sri Vatal Nagaraj has been replied and he must be satisfied with it. Now let us go to further discussion on the Demands for Grants listed in the agenda.

ಶ್ರೀ ವಾಟಾಳ್ ನಾಗರಾಜ್. ನನ್ನ ಪ್ರಶ್ನೆ ಇಷ್ಟೆ ಜನತೆಯ ಪ್ರಭಾವದಿಂದ ಇವರು ದೂರವಾಗಿದ್ದಾರೆ. ಇವರು ಸರ್ಕಾರದಲ್ಲಿ, ಮಂತ್ರಿಮಂಡಲದಲ್ಲಿ ಇರುವುದಕ್ಕೆ ಇವರಿಗೆ ನೈತಿಕ ಮಟ್ಟವಿಲ್ಲ. ಎಷ್ಟು ಚುನಾವಣೆಗಳಲ್ಲಿಯೂ ಸಂಪೂರ್ಣವಾಗಿ ಸೋಲುತ್ತ ಇದ್ದಾರೆ. ಆದ್ದರಿಂದ ನಾನು ಕೇಳುತ್ತಿದ್ದೇನೆ .....

Mr. DEPUTY SPEKER.—I have told the chapter is closed. Now let us take up the motion which has been moved yesterday.

Sri S. M. SHEERANALY CHANDRASEKHAR (Hosanagar).—I have raised a privilege issue which has not been answered. This kind of thing should be discouraged.

ಶ್ರೀ ವಾಟಾಳ್ ನಾಗರಾಜ್.—ಎಂ.ಪಿ ಸಿ.ಸಿ ಯಲ್ಲಿ ದೊಡ್ಡ ಕೊಡೆದಾಟವಾಗಿದೆ, ಕೈ ಕೈ ಮಿಲಾಯಿಸಿದೆ .....

Mr DEPUTY SPEAKER.—You are repeating the same thing, again and again. I cannot ask the Government to go out. There is some procedure. If you want you can bring a no confidence motion. I cannot give too much importance to that. I have faced two elections from that place and I know much about that place. Let us have a sense of proportion. A little restraint is necessary. Going on saying something which has no luster and fire is no use. Mr. Shamanna may speak now.

BUDGET ESTIMATES FOR 1973-74
DEMANDS FOR GRANTS

Demand No 23—(34) Co-operation

† ಶ್ರೀ ಟಿ. ಆರ್. ಶಾಮಣ್ಣ (ಕೋಲಾರ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇರತಕ್ಕ ಕೋ-ಆಪರೇಷನ್ ಡಿಮಾಂಡ್ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಇದನ್ನು ನಾನು ವಿರೋಧಿಸತಕ್ಕ ಒಂದು ಕಾರಣವಾದರೂ ಇಷ್ಟೆ. ನಮ್ಮ ರಾಜ್ಯಕ್ಕೆ ಮತ್ತು ನಮ್ಮ ದೇಶಕ್ಕೆ